# ‘ಶ್ರೀರಾಮಕೃಷ್ಣ ವಚನವೇದ’ ಭಾವಧಾರೆ

ಸ್ವಾಮಿ ನಿತ್ಯಸ್ಥಾನಂದ

ಅವತಾರ ವರಿಷ್ಠರಾದ ಶ್ರೀರಾಮಕೃಷ್ಣರು ತಮ್ಮ ಆತ್ಮೀಯ ಭಕ್ತರೊಂದಿಗೆ ನಡೆಸಿದ ಮಾತುಕತೆಗಳ ಸಂಕಲನ ‘**ಶ್ರೀರಾಮಕೃಷ್ಣ ವಚನವೇದ**’ ದಲ್ಲಿ ಈ ದೇವಮಾನವರ ಪ್ರಧಾನ ಉಪದೇಶಗಳೆಲ್ಲವೂ ಅಡಕವಾಗಿವೆ. ಈ ಕೃತಿಯನ್ನು ಕುರಿತು ವಿವರಣಾತ್ಮಕವೂ ವಿಶ್ಲೇಷಣಾತ್ಮಕವೂ ಬೋಧಪ್ರದವೂ ಆದ ಲೇಖನಸರಣಿಯನ್ನು ಈ ಸಂಚಿಕೆಯಿಂದ ಆರಂಭಿಸುತ್ತಿದ್ದೇವೆ. ಲೇಖಕರು ‘ವಿವೇಕಪ್ರಭ’ದ ಮೊದಲನೆಯ ಸಂಪಾದಕರಾಗಿದ್ದರು; ಬಳಿಕ ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾಗಿದ್ದರು. ಪ್ರಸಿದ್ಧ ಪ್ರವಚನಕಾರರೂ, ಬರಹಗಾರರೂ, ಉತ್ತಮ ಚಿಂತಕರೂ ಆಗಿರುವ ಸ್ವಾಮೀಜಿಯವರು ಅನೇಕ ಗ್ರಂಥಗಳನ್ನು ರಚಿಸಿದ್ದು, ಪ್ರಸ್ತುತ ದಾವಣಗೆರೆ ರಾಮಕೃಷ್ಣ ಮಿಷನ್ ಆಶ್ರಮದ ಅಧ್ಯಕ್ಷರಾಗಿದ್ದಾರೆ.

## ಭಾಗ ೧ : ಪೀಠಿಕೆ

### ಶ್ರೀರಾಮಕೃಷ್ಣರನ್ನು ಕುರಿತು

ಈ ವಿಶ್ವವಿಖ್ಯಾತ ಗ್ರಂಥವನ್ನು ಕುರಿತು ಮಾತನಾಡುವುದಕ್ಕೆ ಮೊದಲು, ಶ್ರೀರಾಮಕೃಷ್ಣರ ಬಗ್ಗೆಯೇ ಸ್ವಲ್ಪ ಹೇಳುವುದು ಆವಶ್ಯಕ. ಶ್ರೀರಾಮಕೃಷ್ಣರು ಧರ್ಮದ ಒಂದು ಪರಿಪೂರ್ಣರೂಪ ಎಂದು ನಾವು ಪರಿಗಣಿಸಬಹುದು. ಧರ್ಮಕ್ಷೇತ್ರದಲ್ಲಿ ನಮಗೆ ಕಂಡುಬರುವ ವಿವಿಧ ಆಧ್ಯಾತ್ಮಿಕ ಸಾಧನೆಗಳೆಲ್ಲ ಅವರಲ್ಲಿ ಕಂಡುಬರುತ್ತವೆ. ಯಾವುದೋ ಒಂದು ಸಾಧನೆಯನ್ನು ಅನುಸರಿಸಿ ಆತ್ಯಂತಿಕ ಗುರಿಯನ್ನು ಮುಟ್ಟಿದ ಹಲವಾರು ಮಹಾಪುರುಷರನ್ನು ನಾವು ಧಾರ್ಮಿಕ ಕ್ಷೇತ್ರದಲ್ಲಿ ಸಂಧಿಸುತ್ತೇವೆ. ಆದರೆ ಶ್ರೀರಾಮಕೃಷ್ಣರಾದರೋ ಮಹತ್ವಾಕಾಂಕ್ಷೆಯಿಂದ ಹಲವು ಮಾರ್ಗಗಳನ್ನು ಅನುಸರಿಸಿ ಯಶಸ್ವಿಯಾಗಿ ಒಂದೇ ಗುರಿಯನ್ನು ತಲುಪಿದರು. ಶ್ರೀರಾಮಕೃಷ್ಣರ ಧಾರ್ಮಿಕ ಅನುಭವಗಳು ವೈವಿಧ್ಯಮಯ. ಎಲ್ಲ ಅನುಭವಗಳ ಸಾಗರವೇ ಅವರಾಗಿದ್ದರು. ಅವರ ಅನುಭವಗಳು ವೇದವೇದಾಂತಗಳನ್ನು ಮೀರಿಹೋಗುತ್ತವೆ ಎಂಬುದು ಶಾಸ್ತ್ರವೇತ್ತರ ಅಭಿಪ್ರಾಯ. ಸಾಮಾನ್ಯ ಮೂರ್ತಿಪೂಜೆಯಿಂದ ಹಿಡಿದು ಅತ್ಯುನ್ನತ ವೇದಾಂತದ ಅನುಭವದವರೆಗೆ ಇಡೀ ಧಾರ್ಮಿಕ ಕ್ಷೇತ್ರವನ್ನು ಅವರು ಜಾಲಾಡಿದರು. ಎಲ್ಲ ಬಗೆಯ ಭಗವತ್ ಕಲ್ಪನೆಗಳು ಹಾಗೂ ಅನುಭವಗಳಿಂದ ಅವರು ಶೋಭಿಸುತ್ತಿರುವುದನ್ನು ನಾವು ಕಾಣುತ್ತೇವೆ. ಹಲವಾರು ಬಗೆಯ ಧಾರ್ಮಿಕ ಪದ್ಧತಿಗಳು, ಆಚರಣೆಗಳು, ಹಾಗೂ ಕ್ರಿಯಾವಿಧಿಗಳು ಇವೆಲ್ಲವೂ ಕೂಡಿ ಅವರಿಗೆ ಒಂದು ವೈವಿಧ್ಯಮಯ ವ್ಯಕ್ತಿತ್ವ ನೀಡಿವೆ. ಕೆಲವೊಮ್ಮೆ ಭಕ್ತಿಭಾವದಿಂದ ಹಾಡುತ್ತ ನರ್ತಿಸುತ್ತಾರೆ, ಕೆಲವೊಮ್ಮೆ ಅತ್ಯುನ್ನತ ಜ್ಞಾನವಿಚಾರದಲ್ಲಿ ತೊಡಗುತ್ತಾರೆ. ಕೆಲವೊಮ್ಮೆ ಶಿಷ್ಯ-ಭಕ್ತರಿಗೆ ಮಾರ್ಗದರ್ಶನ ಮಾಡುತ್ತ ಕಠೋರ ಕರ್ಮಿಗಳಾಗುತ್ತಾರೆ, ಮತ್ತೆ ಕೆಲವೊಮ್ಮೆ ಎಲ್ಲವನ್ನೂ ಮೀರಿ ಹೋಗಿ ಸಮಾಧಿ ಶಿಖರವನ್ನು ಏರುತ್ತಾರೆ. ಅವರು ವೈಷ್ಣವರೂ ಹೌದು, ಶೈವರೂ ಹೌದು, ಶಾಕ್ತರೂ ಹೌದು — ಹೀಗೆ ಎಲ್ಲ ಮತಗಳಿಂದ ಭೂಷಿತರಾಗಿದ್ದರು. ದ್ವೈತಾದ್ವೈತಾದಿ ಎಲ್ಲ ತತ್ತ್ವಗಳ ಸಮನ್ವಯವಾಗಿದ್ದರು ಅವರು. ಹೀಗೆ ಧಾರ್ಮಿಕ ವಿಷಯಕ್ಕೆ



ಸಂಬಂಧಪಟ್ಟಂತೆ ನಾವೇನನ್ನು ಹೇಳಬಹುದೋ ಏನನ್ನು ಕಲ್ಪಿಸಬಹುದೋ ಅವುಗಳೆಲ್ಲದರ ಪರಿಮಾರ್ಜಿತ ರೂಪ ಅವರಾಗಿದ್ದರು. ಶ್ರೀರಾಮಕೃಷ್ಣರನ್ನು ಒಂದು ಧಾರ್ಮಿಕ ವಿಶ್ವಕೋಶ ಎಂದು ಕರೆಯಬಹುದು, ಧರ್ಮಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳನ್ನೂ ಅವರ ಮೂಲಕ ತಿಳಿಯಬಹುದು. ನಾವು ಒಂದು ಡಿಪಾರ್ಟ್‌ಮೆಂಟಲ್ ಅಂಗಡಿಗೆ ಹೋದರೆ, ಅಲ್ಲಿ ಹಣ್ಣು ತರಕಾರಿಗಳಿಂದ ಹಿಡಿದು ಕಂಪ್ಯೂಟರ್ ವಸ್ತುಗಳವರೆಗೆ ಎಲ್ಲವನ್ನೂ ಕೊಂಡುಕೊಂಡು ಬರಬಹುದು. ಹಾಗೆಯೇ

ಶ್ರೀರಾಮಕೃಷ್ಣರಲ್ಲಿ ಧಾರ್ಮಿಕ ವಿಷಯಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳೂ ದೊರೆಯುತ್ತವೆ.

ಧರ್ಮದ ಮೂರು ಮುಖ್ಯಾಂಶಗಳು ಯಾವುವೆಂದರೆ ಆಧ್ಯಾತ್ಮಿಕತೆ, ನೈತಿಕತೆ ಮತ್ತು ಮಾನವೀಯತೆ. ಇವಲ್ಲದೆ ದೇವಾಲಯ ಮಸೀದಿ ಚರ್ಚುಗಳು, ವಿವಿಧ ಶಾಸ್ತ್ರಗ್ರಂಥಗಳು, ಅನೇಕಾನೇಕ ಕ್ರಿಯಾವಿಧಿಗಳು, ಪೂಜಾದಿಗಳು, ಮತಾಚರಣೆಗಳು, ಉತ್ಸವಾದಿಗಳು — ಹೀಗೆ ಧರ್ಮಕ್ಕೆ ಸಂಬಂಧಪಟ್ಟ ಅಸಂಖ್ಯ ಅಂಶಗಳಿವೆ. ಇವೆಲ್ಲವೂ, ಸ್ವಾಮಿ ವಿವೇಕಾನಂದರ ಮಾತಿನಲ್ಲಿ ಹೇಳಬೇಕೆಂದರೆ, ಧರ್ಮದ ಗೌಣವಿಷಯಗಳು, ಅಥವಾ ಅದರ ಹೊರವಲಯಕ್ಕೆ ಸೇರಿದ ಆವರಣಗಳು. ಧರ್ಮವನ್ನು ಒಂದು ವೃಕ್ಷಕ್ಕೆ ಹೋಲಿಸಬಹುದಾದರೆ, ಈ ಧರ್ಮವೃಕ್ಷದ ಬೇರು ಆಧ್ಯಾತ್ಮಿಕತೆ, ನೈತಿಕತೆ ಅದರ ಕಾಂಡ, ಹಾಗೂ ಮಾನವೀಯತೆ ಅದರ ಫಲಪುಷ್ಪಗಳು. ಸಾಮಾನ್ಯವಾಗಿ ಬೃಹತ್ ವೃಕ್ಷದ ಸುತ್ತಲೂ ಅನೇಕ ಪೊದೆಗಳೂ, ಮುಳ್ಳುಕಂಟಿಗಳೂ ಬಳ್ಳಿಗಳೂ ಇರುತ್ತವೆ. ಧರ್ಮದ ಗೌಣ ವಿಷಯಗಳನ್ನು ಇವಕ್ಕೆ ಹೋಲಿಸಬಹುದು. ಈಗ ವೃಕ್ಷದ ಬೇರು ಕಣ್ಣಿಗೆ ಕಾಣದೇ ಇರುವುದರಿಂದ ಅದನ್ನು ಕಡೆಗಣಿಸುವ ಸಾಧ್ಯತೆ ಇರುತ್ತದೆ. ಅದಕ್ಕೆ ಸಾಕಷ್ಟು ನೀರು ಗೊಬ್ಬರ ಇತ್ಯಾದಿಗಳು ದೊರೆಯದಿದ್ದರೆ ಸ್ವಾಭಾವಿಕವಾಗಿ ಇಡೀ ಮರ ಸೊರಗಿಹೋಗುತ್ತದೆ. ಹಾಗಾಗಿ ಅದು ಫಲಪುಷ್ಪ



ಗಳನ್ನು ಬಿಡಲಾರದು. ಆಗ ಉಳಿಯುವುದು ಅದರ ಸುತ್ತಲೂ ಬೆಳೆದಿರುವ ಮುಳ್ಳು, ಪೊದೆ, ಬಳ್ಳಿ ಮುಂತಾದವುಗಳು. ಕೆಲವೊಮ್ಮೆ ಇವುಗಳೇ ಹೆಚ್ಚು ಲಾಭದಾಯಕವೆಂದು ಮರವನ್ನು ಕಡೆಗಣಿಸಿ ಇವುಗಳನ್ನೇ ಪೋಷಿಸುವುದೂ ಉಂಟು.

ಇದೇರೀತಿ ಧರ್ಮದ ಬಹುಮುಖ್ಯ ಅಂಶವಾದ ಆಧ್ಯಾತ್ಮಿಕತೆಯು ಅತ್ಯಂತ ಸೂಕ್ಷ್ಮವಾದುದರಿಂದ ಜನಸಾಮಾನ್ಯರು ಅದನ್ನು ಕಡೆಗಣಿಸುತ್ತಾರೆ. ಇದರ ಪರಿಣಾಮವಾಗಿ ನೈತಿಕತೆಗೆ ಸಾಕಷ್ಟು ಪುಷ್ಟಿ ಸಿಕ್ಕದೆ ಅದು ಕುಸಿಯುತ್ತದೆ, ಅಂದರೆ ಜನರು ನೈತಿಕ ಪ್ರಜ್ಞೆಯನ್ನು ಕಳೆದುಕೊಂಡು ಅನೈತಿಕ ಮಾರ್ಗವನ್ನು ಹಿಡಿಯುತ್ತಾರೆ. ವ್ಯಕ್ತಿಯಲ್ಲಿ ಆಧ್ಯಾತ್ಮಿಕ ಮನೋಭಾವವು ಸುದೃಢವಾಗಿದ್ದರೆ, ಅವನಲ್ಲಿ ನೈತಿಕತೆಯು ಸ್ವಾಭಾವಿಕ ಗುಣವಾಗುತ್ತದೆ. ಹಾಗಾಗಿ ಅವನು ಸಹಜವಾಗಿಯೇ ನೀತಿವಂತನಾಗಿರುತ್ತಾನೆ. ಧರ್ಮವೃಕ್ಷದ ಕಾಂಡವಾದ ನೈತಿಕತೆಯು ಸೊರಗಿಹೋಯಿತೆಂದರೆ, ಆಗ ಅದು ಸಮೃದ್ಧವಾಗಿ ಫಲಪುಷ್ಪಗಳನ್ನು ನೀಡುವುದೆಂತು! ಅಂದರೆ ಜನರು ಮಾನವೀಯತೆಯಿಂದ ದೂರವಾಗುತ್ತಾರೆ. ಸಾಮಾಜಿಕ ಕಳಕಳಿ, ಇತರರ ಕಷ್ಟಸುಖಗಳಿಗೆ ಸ್ಪಂದಿಸುವ ಹೃದಯವಂತಿಕೆ ಇತ್ಯಾದಿಗಳು ಕಣ್ಮರೆಯಾಗುತ್ತವೆ. ಈಗ ಉಳಿಯುವುದೇನು? ಧರ್ಮದ ಹೊರ ಪದರವಾದ ಗೌಣ ವಿಷಯಗಳು. ಕೆಲವರು ತಮ್ಮ ಭೌತಿಕ ಲಾಭಕ್ಕಾಗಿ ಇವುಗಳನ್ನು ಬೆಳೆಸಿಕೊಂಡು ಹೋಗುತ್ತಾರೆ. ಆಧ್ಯಾತ್ಮಿಕ ಹಿನ್ನೆಲೆಯಿದ್ದರೆ ಇವುಗಳಿಗೂ ಒಂದು ವಿಶೇಷ ಅರ್ಥವಿರುತ್ತದೆ. ಇಲ್ಲದಿದ್ದರೆ ಇವು ಅರ್ಥಹೀನ ಗೊಡ್ಡು ಆಚರಣೆಗಳಾಗಿ ಉಳಿಯುತ್ತವೆ.

ಈಗ ಶ್ರೀರಾಮಕೃಷ್ಣರ ಕಡೆ ತಿರುಗೋಣ. ಅವರಲ್ಲಿ ಆಧ್ಯಾತ್ಮಿಕತೆ ಅದೆಷ್ಟು ಜಾಜ್ವಲ್ಯಮಾನವಾಗಿತ್ತು ಎಂಬುದನ್ನು ಪ್ರತ್ಯೇಕ ಹೇಳಬೇಕಾಗಿಯೇ ಇಲ್ಲ. ಅವರು ಆಧ್ಯಾತ್ಮಿಕ ಹಂಬಲದ ಬಿರುಗಾಳಿಗೆ ವಶರಾಗಿ ಮಾಡದೆ ಉಳಿದಿರುವ ಸಾಧನೆಗಳಿಲ್ಲ, ಪಡೆಯದ ಅನುಭವಗಳಿಲ್ಲ. ಪ್ರಸಿದ್ಧ ಇತಿಹಾಸ ತತ್ತ್ವಜ್ಞರಾದ ಆರ್ನಾಲ್ಡ್ ಟಾಯ್ನ್‌ಬಿ ಅವರು ಹೇಳುತ್ತಾರೆ: ''ಶ್ರೀರಾಮಕೃಷ್ಣರ ಧಾರ್ಮಿಕ ಸಾಧನೆಗಳು ಮತ್ತು ಅನುಭವಗಳು ಅದೆಷ್ಟು ವ್ಯಾಪಕವಾಗಿದ್ದವೆಂದರೆ ಬಹುಶಃ ಭಾರತದಲ್ಲಾಗಲಿ ಬೇರೆಕಡೆಯಲ್ಲಾಗಲಿ ಹಿಂದೆಂದೂ ಯಾವ ಧಾರ್ಮಿಕ ಮಹಾಪ್ರತಿಭಾವಂತನೂ ಆ ಮಟ್ಟಕ್ಕೆ ಏರಿರಲಿಲ್ಲ ಎಂದು ಹೇಳಬಹುದಾಗಿದೆ.'' ಶ್ರೀರಾಮಕೃಷ್ಣರು ಈ ರೀತಿ ಆಧ್ಯಾತ್ಮಿಕ ಸಮೃದ್ಧ ಜೀವನವನ್ನು ನಡೆಸಿದ್ದರಿಂದ ಆಗಿನ ಕಾಲದ ಎಲ್ಲ ಧಾರ್ಮಿಕ ಸಂಪ್ರದಾಯಗಳೂ ಅವರಿಂದ ಸ್ಫೂರ್ತಿಯನ್ನೂ ಪುಷ್ಟಿಯನ್ನೂ ಪಡೆದವು. ನೀರಿನಿಂದ ತುಂಬಿರುವ ಒಂದು ಬೃಹತ್ಸರೋವರವಿದ್ದರೆ, ಸುತ್ತಲೂ ಇರುವ ಬಾವಿಕೊಳಗಳು ಅದರಿಂದ ನೀರನ್ನು ಪಡೆಯುತ್ತವೆ, ಮರಗಿಡಗಳೂ ಹಸಿರಾಗಿ ಉಳಿಯುತ್ತವೆ. ಹೀಗೆಯೇ ಶ್ರೀರಾಮಕೃಷ್ಣರ ಅಭೂತಪೂರ್ವ ಆಧ್ಯಾತ್ಮಿಕ ಜೀವನದಿಂದ ಒಂದು ದೊಡ್ಡ ಧಾರ್ಮಿಕ ಜಾಗೃತಿ ಉಂಟಾಯಿತು.

ಧರ್ಮದ ಇನ್ನೊಂದು ಮುಖ್ಯಾಂಶವಾದ ನೈತಿಕತೆಯನ್ನು ಅವರು ಗಂಭೀರವಾಗಿ ಅನುಸರಿಸಿದರು ಎಂಬುದು ಅವರ ಜೀವನದಲ್ಲಿ ಎದ್ದು ಕಾಣುತ್ತದೆ. ನೈತಿಕ ನಿಯಮಗಳನ್ನು ಅವರು ಅಕ್ಷರಶಃ ಪಾಲಿಸಿದರು ಎಂಬುದು ನಾವು ಗಮನಿಸಬೇಕಾದ ಅಂಶ. ''ಕಲಿಯುಗದಲ್ಲಿ ಸತ್ಯವಚನವೇ ತಪಸ್ಸು'' ಎಂದು ಅವರು ಒತ್ತಿಹೇಳಿದರು. ಆಧ್ಯಾತ್ಮಿಕತೆಯು ನೈತಿಕತೆಯನ್ನು ಮೀರಿ ಹೋಗುವುದಾದರೂ, ಅದು ನೈತಿಕತೆಯನ್ನು ಬಿಟ್ಟಿರಲಾರದು. ಯಥಾರ್ಥ ಆಧ್ಯಾತ್ಮಿಕ ವ್ಯಕ್ತಿಯಲ್ಲಿ ನೈತಿಕತೆಯು ವಿವಿಧ ನಿಯಮಗಳಾಗಿ ಉಳಿಯದೆ, ವಿಧಿ-ನಿಷೇಧಗಳಾಗಿ ಉಳಿಯದೆ, ಅದು ಅತ್ಯಂತ ಸ್ವಾಭಾವಿಕವೂ ಸಹಜವೂ ಆದ

ಗುಣಗಳಾಗುತ್ತವೆ. ಅಪ್ರಯತ್ನಪೂರ್ವಕವಾಗಿ ಅವನಲ್ಲಿ ಅದು ಮೂಡಿಬರುತ್ತದೆ. ಆಧ್ಯಾತ್ಮಿಕತೆ ಮತ್ತು ನೈತಿಕತೆ ಇವೆರಡೂ ಒಟ್ಟಿಗೆ ಹೋಗಬೇಕೆಂಬುದನ್ನು ಶ್ರೀರಾಮಕೃಷ್ಣರು ತೋರಿಸಿ ಕೊಟ್ಟರು. ಮೊದಲು ಪ್ರಯತ್ನಪೂರ್ವಕವಾಗಿ ಅನುಸರಿಸುತ್ತಿದ್ದ ನೈತಿಕತೆಯು ಆಧ್ಯಾತ್ಮಿಕತೆಯನ್ನು ಪಡೆದ ಮೇಲೆ ಸಹಜ ಪ್ರವೃತ್ತಿಯಾಗುತ್ತದೆ. ಯಾವುದೇ ಹಂತದಲ್ಲಾಗಲಿ ಧರ್ಮವು ನೈತಿಕತೆಯನ್ನು ಬಿಟ್ಟಿರಕೂಡದು ಎಂಬುದನ್ನು ಶ್ರೀರಾಮಕೃಷ್ಣರು ತಮ್ಮ ಜೀವನ ಮತ್ತು ಸಂದೇಶಗಳ ಮೂಲಕ ತೋರಿಸಿಕೊಟ್ಟಿದ್ದಾರೆ. ನೈತಿಕತೆಯಿಲ್ಲದ ಧಾರ್ಮಿಕ ಆಚರಣೆಗಳಿಗೆ ಯಾವುದೇ ಅರ್ಥವಿಲ್ಲ. ಇಂತಹ ಧಾರ್ಮಿಕತೆಗಿಂತ ನೀತಿವಂತನಾದ ನಾಸ್ತಿಕನಾಗಿರುವುದೇ ಎಷ್ಟೋ ಉತ್ತಮ ಎಂದೆನಿಸುತ್ತದೆ. ಅನೈತಿಕ ಧಾರ್ಮಿಕ ಆಚರಣೆಯಿಂದ ಕ್ರಮೇಣ ಆ ಧರ್ಮವೂ ಲುಪ್ತವಾಗುತ್ತದೆ, ಸಮಾಜವೂ ಅವನತಿ ಹೊಂದುತ್ತದೆ.

ಮೂರನೆಯದಾದ ಮಾನವೀಯತೆಯೂ ಶ್ರೀರಾಮಕೃಷ್ಣರಲ್ಲಿ ಎದ್ದು ಕಾಣುತ್ತದೆ. ಅವರು ಸಮಾಜದಿಂದ ದೂರವಾಗಿ, ಹಿಮಾಲಯಕ್ಕೋ ಕಾಡಿಗೋ ಹೋಗಿ ಆಧ್ಯಾತ್ಮಿಕ ಸಾಧನೆಗಳನ್ನು ಮಾಡಿ ಸಿದ್ಧಿಯನ್ನು ಪಡೆದವರಲ್ಲ. ಅವರು ಕಲ್ಕತ್ತದ ಸಮೀಪದ ದಕ್ಷಿಣೇಶ್ವರ ದೇವಾಲಯದ ಪರಿಸರದಲ್ಲಿಯೇ ಹನ್ನೆರಡು ವರ್ಷ ಕಠಿಣ ಸಾಧನೆಯನ್ನು ಮಾಡಿದರು. ಅವರು ಆ ಸಂದರ್ಭದಲ್ಲಿಯೂ ಜನಸಂಪರ್ಕದಿಂದ ದೂರವಾದವರಲ್ಲ. ಜನರ ಕಷ್ಟ ಸುಖಗಳಿಗೆ ಸ್ಪಂದಿಸುತ್ತಿದ್ದರು, ತಾಯಿ–ಪತ್ನಿಯನ್ನು ಚೆನ್ನಾಗಿ ನೋಡಿಕೊಂಡರು. ನರೇಂದ್ರನಾಥನು (ಮುಂದೆ ಸ್ವಾಮಿ ವಿವೇಕಾನಂದರು), ತಾನು ಯಾವಾಗಲೂ ನಿರ್ವಿಕಲ್ಪ ಸಮಾಧಿಯಲ್ಲಿ ಮುಳುಗಿದ್ದು, ದೇಹಪೋಷಣೆಗಷ್ಟೇ ಎಚ್ಚರಗೊಳ್ಳಬೇಕು ಎಂದು ಕೇಳಿಕೊಂಡಾಗ ಶ್ರೀರಾಮಕೃಷ್ಣರು ಆತನಿಗೆ ಬೈದು, ಆತನು ಆಲದ ಮರದಂತೆ ವಿಶಾಲವಾಗಿ ಬೆಳೆದು ಅಸಂಖ್ಯ ಜನರಿಗೆ ಆಶ್ರಯದಾತನಾಗಿರಬೇಕು, ಈ ರೀತಿ ಸ್ವಾರ್ಥಿಯಾಗಬಾರದು ಎಂದು ಎಚ್ಚರಿಕೆ ನೀಡಿದರು. ಇದೊಂದು ಘಟನೆಯೇ ಸಾಕು ಅವರ ಮಾನವೀಯತೆಯನ್ನು ಪ್ರತಿಬಿಂಬಿಸುವುದಕ್ಕೆ. ಅವರು ಎಲ್ಲರೊಡನೆ ಬೆರೆತರು, ಮಾತನಾಡಿದರು, ಅವರೊಡನೆ ನಕ್ಕು ನಲಿದರು, ನರ್ತಿಸಿದರು, ಜನರ ದುಃಖವನ್ನು ಕಂಡು ಕಣ್ಣೀರಿಟ್ಟರು. ಸಾಧಕರು, ಪತಿತರು, ದರಿದ್ರರು ಎಲ್ಲರಿಗೂ ಅವರ ಸಹಾಯಹಸ್ತ ಮುಂದಾಗಿತ್ತು. ಹೀಗೆ ಧರ್ಮವೆಂದರೆ ಸಮಾಜ ವಿಮುಖವಾದುದಲ್ಲ, ಸಮಾಜಮುಖಿಯಾದುದು ಎಂಬುದನ್ನು ಅವರು ತೋರಿಸಿಕೊಟ್ಟರು.

ಶ್ರೀರಾಮಕೃಷ್ಣರೇ ಹೇಳುತ್ತಿದ್ದರು ''ಕೆಲವರು ಮಾವಿನ ಹಣ್ಣನ್ನು ತಿಂದು ಬಾಯಿ ಒರೆಸಿಕೊಂಡುಬಿಡುತ್ತಾರೆ, ಮತ್ತೆ ಕೆಲವರು ತಾವೂ ತಿಂದು, ಬೇರೆಯವರಿಗೂ ಹಂಚುತ್ತಾರೆ'' ಎಂದು. ಅಂದರೆ, ಕೆಲವರು ಆಧ್ಯಾತ್ಮಿಕ ಅನುಭವದ ಆನಂದವನ್ನು ಪಡೆದು, ತಾವು ಮಾತ್ರ ಅದನ್ನು ಸವಿದು ಜಗತ್ತಿನಿಂದ ಕಣ್ಮರೆಯಾಗುತ್ತಾರೆ. ಆದರೆ ಇನ್ನು ಕೆಲವರು ತಾವೂ ಸವಿದು ಬೇರೆಯವರಿಗೂ ಆ ಸವಿಯನ್ನು ಉಣಿಸಲು ಪ್ರಯತ್ನಿಸುತ್ತಾರೆ. ಶ್ರೀರಾಮಕೃಷ್ಣರು ಈ ಎರಡನೆಯ ಗುಂಪಿಗೆ ಸೇರಿದವರು. ಹೀಗಾಗಿ ಶ್ರೀರಾಮಕೃಷ್ಣರ ಅನುಭವಾಂಬುಧಿಯಿಂದ ಒಂದು ಬೃಹತ್ ಅಲೆಯು ಉದ್ಭವಿಸಿ ಅಸಂಖ್ಯ ಜನರು ಅದರ ಪ್ರಭಾವಕ್ಕೆ ಒಳಗಾದರು, ಒಂದು ಅಂತರರಾಷ್ಟ್ರೀಯ ಸಂಸ್ಥೆಯೇ ಉದಯಿಸಿತು, ಒಂದು ಬೃಹತ್ ಸಾಹಿತ್ಯರಾಶಿಯೇ ಹುಟ್ಟಿಕೊಂಡಿತು, ವೈವಿಧ್ಯಮಯ ಸೇವಾಕಾರ್ಯಗಳು ಹರಡಿಕೊಂಡವು, ಮತ್ತು ನವನವೀನ ಚಿಂತನೆಯ ಹನಿಗಳು ಎಲ್ಲೆಲ್ಲಿಯೂ ಪಸರಿಸುವಂತಾಯಿತು.

ಶ್ರೀರಾಮಕೃಷ್ಣರ ಒಂದು ವೈಶಿಷ್ಟ್ಯವೇನೆಂದರೆ ಧರ್ಮದ ಗೌಣ ವಿಷಯಗಳನ್ನು ಕಡೆಗಣಿಸದೆ ಇದ್ದುದು. ಅವರು ಒಂದು ದೇವಾಲಯದಲ್ಲಿ ಪೂಜೆ ಮಾಡುತ್ತಲೇ ತಮ್ಮ ಆಧ್ಯಾತ್ಮಿಕ ಜೀವನವನ್ನು ಪ್ರಾರಂಭಿಸಿದರು. ಹಬ್ಬಹರಿದಿನಗಳಲ್ಲಿ ಭಾಗವಹಿಸಿದರು, ಧಾರ್ಮಿಕ ಉತ್ಸವಗಳಲ್ಲಿ ಪೂರ್ಣಮನಸ್ಸಿನಿಂದ ಭಾಗವಹಿಸಿದರು, ಅನೇಕ ತೀರ್ಥಯಾತ್ರೆಗಳನ್ನೂ ಮಾಡಿದರು. ಯಾವ ಧಾರ್ಮಿಕ ಕ್ರಿಯಾವಿಧಿಯನ್ನೂ ಅವರು ಕಡೆಗಣಿಸಲಿಲ್ಲ. ಧಾರ್ಮಿಕ ಹೊರಪದರಗಳು ಹಣ್ಣಿನ ಸಿಪ್ಪೆಯಿದ್ದಂತೆ ಎಂದು ಅವರು ಹೇಳುತ್ತಿದ್ದರು. ಹಣ್ಣಿನಲ್ಲಿ ತಿರುಳೇ ಮುಖ್ಯವಾದರೂ, ಸಿಪ್ಪೆಯು ಬಿಸಾಕುವಂತಹುದಾದರೂ, ತಿರುಳನ್ನು ಸವಿಯುವವರೆಗೂ ಸಿಪ್ಪೆಯನ್ನು ಉಳಿಸಿಕೊಳ್ಳಬೇಕಾಗುತ್ತದೆ. ಸಿಪ್ಪೆಯಿಲ್ಲದೆ ಬರಿ ತಿರುಳು ದೊರೆಯದು. ಆದ್ದರಿಂದ ಶ್ರೀರಾಮಕೃಷ್ಣರು ಇಡೀ ಧರ್ಮವನ್ನು ಸ್ವೀಕರಿಸಿದರು. ಆದರೆ ಧರ್ಮದ ಗೌಣಾಂಶಗಳಿಗೇ ಪ್ರಾಧಾನ್ಯವನ್ನು ನೀಡಿದರೆ, ಅವುಗಳೇ ನಿಜವಾದ ಧರ್ಮವೇನೋ ಎಂಬಂತೆ ಅನುಸರಿಸಿದರೆ, ಅವೇ ಅಧಿಕವಾಗಿ ಧರ್ಮದ ಮುಖ್ಯಾಂಶಗಳು ಕಣ್ಮರೆಯಾಗುತ್ತವೆ. ಇದು ಹೇಗೆಂದರೆ ದೇವತಾಮೂರ್ತಿಗೆ ಅತಿಯಾದ ಅಲಂಕಾರ ಮಾಡುವುದರಿಂದ ಮೂರ್ತಿಯೇ ಮರೆಯಾಗುವಂತೆ. ರವೀಂದ್ರನಾಥ ಟಾಗೋರರ ಪದ್ಯದ ಒಂದು ಸಾಲು ನೆನಪಿಗೆ ಬರುತ್ತದೆ: ''**ತೊಮಾರ್ ಪೂಜಾರ್ ಛಲೇ ತೋಮಕೇ ಭುಲೇ ಥಾಕಿ** ''— 'ನಿನ್ನ ಪೂಜೆಯ ನೆಪದಲ್ಲಿ ನಿನ್ನನ್ನೇ ಮರೆತು ಬಿಡುತ್ತೇನೆ.'

ಇನ್ನೊಂದು ಅತಿರೇಕ, ಧರ್ಮದ ಆಧ್ಯಾತ್ಮಿಕ ಅಂಶವನ್ನು ಮಾತ್ರ ಇಟ್ಟುಕೊಂಡು ಗೌಣಾಂಶಗಳನ್ನು ಬಿಟ್ಟುಬಿಡುವುದು. ಈಗ ಅಧ್ಯಾತ್ಮ ಮತ್ತು ಧರ್ಮವನ್ನು ಪ್ರತ್ಯೇಕಿಸುವ ಒಂದು ಪ್ರವೃತ್ತಿ ಇದೆ. ಧರ್ಮವೆಂದರೆ ಕ್ರಿಯಾವಿಧಿ, ಪೂಜೆ, ಉತ್ಸವಗಳು, ಧಾರ್ಮಿಕ ಸಂಸ್ಥೆಗಳು, ಮತೀಯ ನಂಬಿಕೆಗಳು ಮುಂತಾದವುಗಳು. ಅಧ್ಯಾತ್ಮವೆಂದರೆ ಆತ್ಮ ಅಥವಾ ದೇವರ ಸಾಕ್ಷಾತ್ಕಾರಕ್ಕಾಗಿ ಮಾಡುವ ಧ್ಯಾನಜಪಾದಿ ಸಾಧನೆಗಳು. ಇವುಗಳನ್ನು ಅನುಸರಿಸಲು ಧರ್ಮದ ಆವಶ್ಯಕತೆಯಿಲ್ಲ, ಯಾವುದೇ ಸಂಸ್ಥಾ

ಬದ್ಧ ಧರ್ಮಕ್ಕೂ ವ್ಯಕ್ತಿಯು ಸೇರಿರಬೇಕಾಗಿಲ್ಲ — 'ನಾನು ಆಧ್ಯಾತ್ಮಿಕ, ಆದರೆ ಧಾರ್ಮಿಕನಲ್ಲ' (I am spiritual, but not religious) ಎಂಬ ಧೋರಣೆಯುಳ್ಳವರಾಗಿರುತ್ತಾರೆ, ಈ ಪಂಗಡದವರು. ಆದರೆ ಈ ರೀತಿಯ ಆಧ್ಯಾತ್ಮಿಕತೆಯೂ ಕ್ರಮೇಣ ಮುಂದೊಂದು ಕಾಲದಲ್ಲಿ ಧಾರ್ಮಿಕ ಆಚರಣೆಗಳು, ನಂಬಿಕೆಗಳು, ಪೂಜಾದಿಗಳು ದೇವಾಲಯಗಳು, ಗ್ರಂಥಗಳು ಇವುಗಳಿಂದ ಆವೃತವಾಗುತ್ತದೆ. ಹಾಗೆ ಅದರ ಸುತ್ತ ಒಂದು ಧರ್ಮ ಬೆಳೆದುಕೊಂಡುಬಿಡುತ್ತದೆ. ಹೀಗೆಯೇ ಅನೇಕ ಧರ್ಮಗಳು ಹುಟ್ಟಿರುವುದು. ಆದ್ದರಿಂದ ಅಧ್ಯಾತ್ಮ ಮತ್ತು ಧರ್ಮಗಳನ್ನು ಬೇರ್ಪಡಿಸುವುದು ಉಚಿತವಲ್ಲ. ಅದರ ಬದಲು ಧರ್ಮದೊಡನೆ ಅಧ್ಯಾತ್ಮವನ್ನು ಒಂದಾಗಿಸಬೇಕು. ಶ್ರೀರಾಮಕೃಷ್ಣರು ಮಾಡಿದುದು ಇದನ್ನೇ. ನಮ್ಮ ಎಲ್ಲ ಬಗೆಯ ಧಾರ್ಮಿಕ ಆಚರಣೆಗಳ ಹಿಂದೆಯೂ ಆಧ್ಯಾತ್ಮಿಕ ಆದರ್ಶವಿರಬೇಕು ಎಂಬುದನ್ನು ಅವರು ತೋರಿಸಿಕೊಟ್ಟರು. ಯಾವುದೇ ಧಾರ್ಮಿಕ ಚಟುವಟಿಕೆಯಲ್ಲಿ ಅವರು ಭಾಗವಹಿಸಲಿ ಅಧ್ಯಾತ್ಮಭಾವದಲ್ಲಿ ತಲ್ಲೀನರಾಗಿರುತ್ತಿದ್ದರು. ಶ್ರೀರಾಮಕೃಷ್ಣರು ಅಧ್ಯಾತ್ಮ ಮತ್ತು ಧರ್ಮವನ್ನು ಸಮನ್ವಯಗೊಳಿಸಿದರು ಎಂದು ಹೇಳಬಹುದು. ಧಾರ್ಮಿಕ ಆಚರಣೆಗಳು ಆಧ್ಯಾತ್ಮಿಕ ಸಾಧನೆ, ಅನುಭವಗಳಲ್ಲಿ ಪರ್ಯವಸಾನಗೊಳ್ಳಬೇಕು. ಆದ್ದರಿಂದ ನಮಗೆ ಧರ್ಮ ಮತ್ತು ಅಧ್ಯಾತ್ಮ ಇವೆರಡೂ ಬೇಕು. ''ನಮಗೆ ಅಧ್ಯಾತ್ಮ ಬೇಕು, ಧರ್ಮ ಬೇಡ ಎಂದು ಹೇಳಿದರೆ, ಊಟವನ್ನು ಪ್ರೀತಿಸುತ್ತೇನೆ, ಆದರೆ ಅಡಿಗೆಯನ್ನು ದ್ವೇಷಿಸುತ್ತೇನೆ ಎಂದಂತಾಗುತ್ತದೆ.'' ('Saying you are spiritual but not religious is like saying you love food, but hate cooking') ಎಂದು ಫಾದರ್ ಡ್ವೇಟ್ ಲಾಂಜನೀಕರ್ ಹೇಳುತ್ತಾರೆ.

ಜನಸಾಮಾನ್ಯರು ಆಚರಿಸುತ್ತಿರುವ ಧರ್ಮದಲ್ಲಿ ಅನೇಕ ದೋಷಗಳಿರಬಹುದು, ಮೂಢನಂಬಿಕೆಗಳಿರಬಹುದು, ಅನೇಕ ಹಿಂಸೆ ರಕ್ತಪಾತಗಳು ಅದರಿಂದ ಆಗಿರಬಹುದು; ಆದರೂ ಅದನ್ನು ದೂರವಿರಿಸುವಂತಿಲ್ಲ, ಬದಲು ಆ ದೋಷಗಳನ್ನು ನಿವಾರಿಸಲು ನಾವು ಪ್ರಯತ್ನಿಸಬೇಕು. ಸ್ವಾಮಿ ವಿವೇಕಾನಂದರು ಹೇಳುತ್ತಾರೆ: ''ಧರ್ಮವು ಒಂದು ಶ್ರೇಷ್ಠವಾದ ಕರೆಯುವ ಹಸು. ಅದು ಚೆನ್ನಾಗಿ ಒದೆಯಬಹುದು, ಆದರೂ ಅದನ್ನು ಕಡೆಗಣಿಸುವಂತಿಲ್ಲ, ಏಕೆಂದರೆ ಅದು ತುಂಬ ಹಾಲು ಕೊಡುತ್ತದೆ.'' ಧರ್ಮವಿಲ್ಲದೆ ಮನುಷ್ಯನು ಇರಲಾರನೆಂಬುದನ್ನು ಮಾನವನ ಇತಿಹಾಸವು ಎತ್ತಿ ತೋರಿಸುತ್ತಿದೆ. ಆಧ್ಯಾತ್ಮಿಕ ಸಸಿಯನ್ನು ಬೆಳೆಸಲು ಧಾರ್ಮಿಕ ಕುಂಡವು ಆವಶ್ಯಕ. ಸಸಿಯು ಬೆಳೆದಮೇಲೆ ಆ ಕುಂಡದ ಆವಶ್ಯಕತೆ ಇಲ್ಲದಿರಬಹುದು. ಶ್ರೀರಾಮಕೃಷ್ಣರು ಈ ಬಹುಮುಖ್ಯವಾದ ಶಾಶ್ವತ ಸತ್ಯವನ್ನು ಲೋಕಕ್ಕೆ ತೋರಿಸಿ ಕೊಟ್ಟಿರುವರು.

ಶ್ರೀರಾಮಕೃಷ್ಣರು ದೋಷಮುಕ್ತವಾದ ಪರಿಪೂರ್ಣ ಧರ್ಮವನ್ನು ಪ್ರತಿನಿಧಿಸುತ್ತಾರೆ. ಧರ್ಮದ ವಿಷಯದಲ್ಲಿ ಅವರೊಂದು 'ರೆಫರೆನ್ಸ್' ಪುಸ್ತಕವಿದ್ದ ಹಾಗೆ. ಸ್ವಾಮಿ ವಿವೇಕಾನಂದರ ಮಾತಿನೊಂದಿಗೆ ಈ ಲೇಖನವನ್ನು ಸಮಾಪ್ತಿಗೊಳಿಸೋಣ: ''ದೋಷಗಳನ್ನು ಎಣಿಸದೆ ಪ್ರತಿಯೊಂದು ಧರ್ಮವನ್ನೂ ಸ್ವೀಕರಿಸುವ ಮನೋಭಾವ ಶ್ರೀರಾಮಕೃಷ್ಣರದು. ಅವರ ಶಿಷ್ಯರಾದ ನಾವೆಲ್ಲರೂ ಈ ಗುಣವನ್ನು ಮೈಗೂಡಿಸಿಕೊಂಡಿರುವೆವು. ಅವರು ಈ ಸ್ಥಿತಿಯನ್ನು ಪಡೆಯಲು ಬಹಳಷ್ಟು ಸಾಧನೆ ಮಾಡಬೇಕಾಯಿತು. ಯಾವ ಧರ್ಮವನ್ನು ಅವರು ತಿಳಿದುಕೊಳ್ಳಲು ಬಯಸಿದರೋ ಅದರ ಅನುಯಾಯಿಗಳಂತೆಯೇ ಉಣ್ಣುತ್ತಿದ್ದರು, ಅವರಂತೆಯೇ ಉಡುಗೆ, ತೊಡುಗೆ ತೊಡುತಿದ್ದರು. ಅವರಿಂದ ದೀಕ್ಷೆ ಪಡೆಯುತ್ತಿದ್ದರು, ಹಾಗೂ ಅವರ ಮಾರ್ಗವನ್ನೇ ಅನುಸರಿಸುತ್ತಿದ್ದರು. 'ನಾವು ಕಲಿಯಬೇಕಾದರೆ ಇತರರ ಹೃದಯವನ್ನು ಪ್ರವೇಶಿಸಬೇಕು' ಎಂದು ಅವರು ಹೇಳುತ್ತಿದ್ದರು. ಈ ವಿಧಾನ ಅವರದೇ ಆಗಿತ್ತು. ಭಾರತದಲ್ಲಿ (ವಿದೇಶದಲ್ಲಿಯೂ ಕೂಡ) ಹಿಂದೆಂದೂ ಯಾವ ಒಬ್ಬ ವ್ಯಕ್ತಿಯೂ ಪರ್ಯಾಯವಾಗಿ ಕ್ರೈಸ್ತನೂ ಮಹಮ್ಮದನೂ ವೈಷ್ಣವನೂ ಆಗಿರಲಿಲ್ಲ.'' *(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ೯. ೩೫೩)*

*(ಮುಂದುವರಿಯುವುದು)*

## ಶ್ರೀರಾಮಕೃಷ್ಣರ ದಿವ್ಯದರ್ಶನ

''**ಬೋ**ಸ್ಟನ್ನಿನಲ್ಲಿ ನಾನು ಏಕಾಂತವಾಗಿ ಮತ್ತು ಮೌನವಾಗಿ ಕಾಲವನ್ನು ಕಳೆಯುತ್ತಿದ್ದೆ. ಒಂದು ಮಧ್ಯಾಹ್ನ ನಾನು ನನ್ನ ಕೋಣೆಯೊಳಗೆ ಕುಳಿತುಕೊಂಡು ಏನೂ ಗೊತ್ತುಗುರಿಯಿಲ್ಲದೆ ದುಃಖಿತಳಾಗಿ ಚಿಂತಿಸುತ್ತಿದ್ದೆ. ಆಗ ಇದ್ದಕ್ಕಿದ್ದಂತೆ ನನ್ನ ಮುಂದೆ ಇಬ್ಬರು ವ್ಯಕ್ತಿಗಳು ಪ್ರತ್ಯಕ್ಷರಾಗಿ ಬಂದು ನಿಂತರು. ಅವರಲ್ಲಿ ಒಬ್ಬರ ವದನಾರವಿಂದವು ದಿವ್ಯ ಮುಗುಳುನಗೆಯನ್ನು ಬೀರುತ್ತಿರುವಂತೆ ತೋರುತ್ತಿತ್ತು. ಅವರು ಪ್ರಶಾಂತ ಮೃದು ಮಧುರ ದನಿಯಲ್ಲಿ ನನ್ನನ್ನು ಸಂತೈಸುತ್ತಾ, ''ಚಿಂತಿಸಬೇಡ! ನೀನು ನನ್ನ ಕೆಲಸವನ್ನು ಮಾಡಬೇಕಾಗಿದೆ'' ಎಂದು ತಿಳಿಸಿದರು. ಅನಂತರ ಅವರಿಬ್ಬರೂ ಅದೃಶ್ಯರಾದರು. ಈ ದರ್ಶನ ಮುಗಿದ ನಂತರವೂ ಆ ಆನಂದ ಲಹರಿಯು ಎಡೆಬಿಡದೆ ನನ್ನನ್ನು ಆವರಿಸಿತ್ತು.

ನ್ಯೂಯಾರ್ಕಿನ ವೇದಾಂತ ಸಂಘದ ಸದಸ್ಯೆಯಾಗಿ ಸೇರಿದ ನಂತರ ಒಂದು ದಿನ ಅಲ್ಲಿ ಅಧ್ಯಕ್ಷರ ಕೋಣೆಯಲ್ಲಿ ತೂಗುಹಾಕಿದ್ದ ಚಿತ್ರವನ್ನು ನೋಡಿದೆ. ಆಶ್ಚರ್ಯದಿಂದ ಸ್ತಬ್ಧಳಾಗಿ ನಿಂತುಬಿಟ್ಟೆ; ಏಕೆಂದರೆ ನನಗೆ ದರ್ಶನ ನೀಡಿದ್ದ ವ್ಯಕ್ತಿ ಅವರೇ! ಅವರು ಯಾರು ಎಂದು ಅಧ್ಯಕ್ಷರನ್ನು ಕೇಳಿದಾಗ ಅವರು, ''ಅವರೇ ನನ್ನ ಗುರುದೇವ ಶ್ರೀರಾಮಕೃಷ್ಣರು'' ಎಂದರು. *— ಸೋದರಿ ದೇವಮಾತಾ*